BUSINESS OF THE HOUSE

Mr. SPEAKER.—Now discussion on Educational Reforms. Sri T. Mariappa, the other day, had commenced the debate. He may continue.

(*At this stage Sri S. Gopala Gowda was found talking aloud to Sri Mulka Govinda Reddy.*)

Mr. SPEAKER.—If the member wants to say anything, he must rise in his seat and catch the Speaker's eye and say what he wants to say, but not go on making any side remarks.

ಶ್ರೀ ಎಸ್ ಗೋಪಾಲಗೌಡ (ಸಾಗರ-ಹೊಸನಗರ).—ಸ್ವಾಮಿ, ಈ ಸಭೆಯು ನಡೆವಳಿಕೆಗಳ ಬಗ್ಗೆ, ಇದುವರೆಗೂ ನಾವು ಈ ಅಧಿವೇಶನದಲ್ಲಿ ಯಾವ ಒಂದು ಗೊತ್ತಾದ ಕಾರ್ಯಕ್ರಮವನ್ನೂ ಮುಗಿಸುವುದಕ್ಕೆ ಸಾಧ್ಯವಾಗಿಲ್ಲವೆಂದು ಬಹಳ ವಿಷಾದದಿಂದ ಹೇಳ ಬೇಕಾಗಿದೆ. ಈ ರೀತಿ ಮಾಡುವುದರಿಂದ ಸದಸ್ಯರಿಗೆ ಆಯಾ ದಿನದ ಕಾರ್ಯಕ್ರಮದಲ್ಲಿ ಪೂರ್ಣವಾಗಿ ಭಾಗ ವಹಿಸುವುದಕ್ಕೆ—ವೈಯಕ್ತಿಕವಾಗಿ ಹೇಳಬೇಕಾದತೆ—ನನಗಂತೂ ಸಾಧ್ಯವಾಗಿಲ್ಲ. ಆದ್ದರಿಂದ ಒಂದು ಗೊತ್ತಾದ ಕಾರ್ಯಕ್ರಮವನ್ನು ಮೊದಲೇ ಕೊಟ್ಟು ಸಾಧ್ಯವಾದಮಟ್ಟಿಗೂ ಅದಕ್ಕೆ ಹೊಂದಿಕೊಂಡು ಕಾರ್ಯವನ್ನು ನೆರವೇರಿಸಿಕೊಡಬೇಕೆಂದು ನಾನು ಹೇಳುತ್ತೇನೆ.

*Sri MULKA GOVINDA REDDY (Chitaldrug).—I agree with Sri S. Gopala Gowda. You have been requesting the Leader of the House to state categorically the programme of the House, for the last three or four days. We may not be in a position to know what is going to be taken up to-morrow; late in the evening we may get some programme regarding to-morrow's business. Regarding the business of the House, we will not be able to know exactly when they are going to take up the Andhra State Bill, the report on Educational Reforms and other things. It is really a pity that such a thing should continue to occur. In spite of our repeated request to the Government, they have not been able to say what exactly is the further programme of the House.

Sri J. MOHAMED IMAM (Jagalur).—Yesterday, I think, the Speaker said that the business would be settled in consultation with the Leader of the House and myself. I have been waiting, but till now nothing has been done. As pointed out by my friends, we are working without a definite programme. I have been asking about the programme for the last three days. We must settle the future programme of the session—how long are we meeting and what is the work to be taken up on a particular day. Till now we had not any assurance.

Mr. SPEAKER.—I feel this is a very pertinent question. The Leader of the House will have to take special interest in drafting the programme. A draft programme was prepared in the Office and that has been given to him, to which he has not yet given consent. He may make some alterations. That is why I said that in further consultation with him and the Leader of the Opposition party, we will announce the future programme. By to-morrow I will be in a position, I hope, to announce the further programme for the session.

Sri J. MOHAMED IMAM.—The unfortunate postion is, always they will plead urgency and they plead that it cannot be postponed. Just to-day they have not yet taken up the Andhra State Bill, though it is the primary business for the session. Yesterday I said that the Bill must be pushed through and that the discussion on it should be over by the 24th.

Mr. SPEAKER.—That is why I said I am very particular about consulting you and the Leader of the House.

Sri J. MOHAMED IMAM.—We have been waiting for consultation till yesterday.

Mr. SPEAKER.—By to-morrow I hope we will do it. I would like to have some idea as to how many days would be required so far as the Andhra State Bill is concerned.

Sri J. MOHAMED IMAM.—For the Andhra State Bill we require not less than five days. As it is a Bill there should not be time restriction and there are a number of amendments also. In fact, it is the deliberation of this House that will be taken into consideration. For the Educational Reforms, I think not less than 4 days will be required.

Mr. SPEAKER.—One day we have already spent.

Sri J. MOHAMED IMAM.—Only one gentleman has spoken; that is the indication as to how many days we will require.

Mr. SPEAKER.—Is it the suggestion of the House that we should have five days for the Andhra State Bill? And how many days for the Educational Reforms?

Sri J. MOHAMED IMAM.—Four days.

Mr. SPEAKER.—In all, we would require nine days.

Sri J. MOHAMED IMAM.—They have already taken five days at Madras and they have not been able to cover even half the programme. For the Legislative Council it is the fifth day. That is the main programme. I would even suggest that this House may postpone the consideration of the report of the Committee on Educational Reforms to another session and be done with it. But I do not believe in hustling through.

Sri K. HANUMANTHAIYA.—The Government have absolutely no objection to give as much time as is necessary, particularly in respect of the Andhra State Bill. Regarding the report on Educational Reforms, if only we can avoid repetition of ideas, I believe, we could cut the number of days. I leave it to the House so that, if repetition of ideas is avoided, certainly I feel, we can cut the duration of the debate by one day. Three more days including to-day might be enough. That is my opinion.

Mr. SPEAKER.—For the Andhra State Bill, shall we have five days?

Sri A. G. RAMACHANDRA RAO (Minister for Law and Education).—May be given. We have absolutely no idea of cutting down any discussion. Let it be as ample as the subject warrants.

Mr. SPEAKER.—So it is now understood four days for the Educational Reforms and five days for the Andhra State Bill. I will have the programme drafted.

Sri M. V. RAMA RAO (Tumkur).—May I know whether four days' allotted for debate on the Educational Reforms Committee Report will be in addition to the day on which debate has already taken place or whether it will include that day also.

Sri K. PATTABHIRAMAN (Kolar).—I think it will include.

DISCUSSION ON EDUCATIONAL REFORMS (*Continued*).

*ಶ್ರೀ ಟಿ. ಮರಿಯಪ್ಪ (ಮೈಸೂರು).-ಮಾನ್ಯ ಅಧ್ಯಕ್ಷರೇ, 16ನೆಯ ತಾರೀಖಿನ ದಿವಸ ವಿದ್ಯಾಭ್ಯಾಸದ ಸುಧಾರಣೆಗಳ ವಿಷಯವಾಗಿ ನಾನು ಮಾಡಿದಂಥ ಭಾಷಣವನ್ನು ಈ ಸಭೆಯ ಮಾನ್ಯನದನ್ಯರು ಜ್ಞಾಪಕದಲ್ಲಿಟ್ಟುಕೊಂಡಿದ್ದಾರೆಂದು ನಾನು ನಂಬುತ್ತೇನೆ. ಪ್ರಾಯಶಃ, ಒಂದೇ ದಿವಸ ಭಾಷಣ ಆಗಿದಿದ್ದರೆ ಚೆನ್ನಾಗಿರುತ್ತಿತ್ತು. ಆ ದಿವಸ ನಾನು ಏನು ಪ್ರಸ್ತಾಪ ಮಾಡಿದೆನೋ ಅದನ್ನು ಸ್ಥೂಲವಾಗಿ ಸೂಚಿಸಿ ನನ್ನ ಭಾಷಣವನ್ನು ಮುಂದುವರಿಸಲಿಚ್ಛಿಸುತ್ತೇನೆ.

ಪ್ರಾಥಮಿಕ ವಿದ್ಯಾಭ್ಯಾಸ ಮಾಧ್ಯಮಿಕವಿದ್ಯಾಭ್ಯಾಸ ನಾಲ್ಕು ನಾಲ್ಕು ವರ್ಷಗಳೆಂದು ಇರತಕ್ಕ ಈ pattern ನ್ನು ತಪ್ಪಿಸಬಾರದೆಂದು ಆ ದಿವಸ ನಾನು ಸಲಹೆ ಮಾಡಿದೆ. ಅದಕ್ಕೆ ಕೆಲವು ಕಾರಣಗಳನ್ನೂ ನಾನು ಕೊಟ್ಟೆ. ರಾಜ್ಯಾಂಗದಲ್ಲಿ ದೇಶದ ಪ್ರಜೆಗಳಿಗೆ 8ವರ್ಷಗಳ ಕಾಲ ಯಾವ ವಿದ್ಯಾಭ್ಯಾಸದ ಶುಲ್ಕವನ್ನೂ ವಿಧಿಸದೆ ವಿದ್ಯಾಭ್ಯಾಸ ದೊರೆಯಬೇಕೆಂದು ನಿಯಮವಾಗಿರುವಾಗ ಮತ್ತು ಅನೇಕ ವರ್ಷಗಳಿಂದ ಅಂಥ ವಿದ್ಯಾಭ್ಯಾಸದ ಪ್ರಯೋಜನವನ್ನು ಜನರಿಗೆ ದೊರೆಯುತ್ತಿರುವಾಗ ಈಗ ಬೇರೆ ಬದಲಾವಣೆ ಮಾಡುವುದು ಸೂಕ್ತವಲ್ಲ. ಅಲ್ಲದೆ 6 ವರ್ಷಗಳನಂತರ 2 ವರ್ಷಗಳ ಕಾಲ ಶುಲ್ಕಕೊಡಬೇಕೆಂದು ಹೇಳುವುದು ರಾಜ್ಯಾಂಗದಲ್ಲಿ ಅಡಗಿರತಕ್ಕ ನಿಬಂಧನೆಗೆ ವಿರೋಧವಾಗುತ್ತದೆ. ಈ ದೃಷ್ಟಿಯಿಂದ ಅದು ಕಾನೂನಿಗೆ ವಿರೋಧವಾದದ್ದೆಂಬ ಸೂಚನೆಯನ್ನೂ ನಾನು ತಿಳಿಸಿದೆ.

ಡಾ॥ ಸಿ. ಆರ್. ರೆಡ್ಡಿಯವರೂ ಕೂಡ ಅವರ ವರದಿಯಲ್ಲಿ ಇದನ್ನೆಲ್ಲಾ ಖಚಿತವಾಗಿ ತಿಳಿಸಿದ್ದಾರೆ. ಪ್ರಖ್ಯಾತರಾದ ಡಾ॥ ರೆಡ್ಡಿಯವರು ಮೈಸೂರಿನಲ್ಲಿ ವಿದ್ಯಾಭ್ಯಾಸ ಇಲಾಖೆಯ ಮುಖ್ಯಾಧಿಕಾರಿಗಳಾಗಿದ್ದರು, ಮಹಾರಾಜಾ ಕಾಲೇಜಿನಲ್ಲಿ ಪ್ರೊಫೆಸರೂ ಪ್ರಿನ್ಸಿಪಾಲರೂ ಆಗಿದ್ದರು. ಇಂಥ ಮಹನೀಯರು ಮಾಡಿರುವ ಸಲಹೆಗಳು ಅಂಗೀಕಾರಯೋಗ್ಯವಾಗಿವೆ. ಅವರು ಶಿಕ್ಷಣ ಕ್ಷೇತ್ರದಲ್ಲಿ ವಿಶೇಷ ಅನುಭವವನ್ನು ಪಡೆದಿದ್ದರು. ಇಂಥವರು ವಿದ್ಯಾಭ್ಯಾಸದಲ್ಲಿ ಯಾವ ಸುಧಾರಣೆ ಯಾಗಬೇಕೆಂದು ಒಂದು ವರದಿಯನ್ನು ಸರ್ಕಾರಕ್ಕೆ ರ್ಪಿಸಿದ್ದಾರೆ. ಆ ವರದಿಯ 50ನೆಯ ಪುಟದಲ್ಲಿ ಈ ರೀತಿ ಹೇಳಿದೆ :

> "The first point requiring consideration is what should be the duration of each of these stages in general education.
>
> *Primary and Middle School Education.*
>
> There is no special need to make a marked departure in the present practice. It will be probably prudent not to lengthen the primary education period as this would automatically increase the financial

(ಶ್ರೀ ಟಿ. ಮರಿಯಪ್ಪ.)

commitments of the State in view of its policy of Compulsory Primary Education."

ಅವರು ಪ್ರಾಥಮಿಕ ಮತ್ತು ಮಾಧ್ಯಮಿಕ ವಿದ್ಯಾಭ್ಯಾಸ ಇವೆರಡೂ ಒಟ್ಟು ಎಂಟು ವರ್ಷಗಳಿರಬೇಕು, ಇದಕ್ಕಿಂತ ಜಾಸ್ತಿಯಾಗಿರಬಾರದು, ಹಾಗೆ ಮಾಡಿದರೆ ದೇಶಕ್ಕೆ ಹೆಚ್ಚು ಖರ್ಚಾಗುತ್ತದೆ ಎಂದು ಹೇಳಿದ್ದಾರೆ. ಈ ಅಂಶವನ್ನು ಡಾ॥ ರತ್ನಸ್ವಾಮಿಯವರೂ ಹೇಳಿದ್ದಾರೆ. ಇವರೂ ಪ್ರಖ್ಯಾತರಾದ ಶಿಕ್ಷಣ ಶಾಸ್ತ್ರಜ್ಞರು. ಇವರು ವೈಸ್ ಚಾನ್ಸೆಲರ್ ಕೂಡ ಆಗಿದ್ದರು. ಇವರು ಹೀಗೆ ಹೇಳಿದ್ದಾರೆ (page 408) :

"I think the promotion of literacy ought to be the only object of the Department for the present in the financial condition of the State; for that, a four-year period is quite enough provided proper methods are used and the wastage resulting from 70 per cent of those that enter the first class not going up to the fourth year is avoided."

ನೆಕೆಂಡರಿ ವಿದ್ಯಾಭ್ಯಾಸಕ್ಕೆ ಆಮೇಲೆ ಬರುತ್ತೇನೆ; ಇದಕ್ಕೆ ಬೇರೆ ಅಭಿಪ್ರಾಯವಿದೆ. ಶ್ರೀ ಕೋದಂಡ ರಾಯರೂ ತಮ್ಮ 'ಡಿಸೆಂಟಿಂಗ್ ನೋಟ್'ನಲ್ಲಿ ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಹೀಗೆ ಅನೇಕ ವರ್ಷಗಳಿಂದ ಮೈನೂರಿನಲ್ಲಿ ಪ್ರಜೆಗಳಿಗೆ ಲಭ್ಯವಾಗುತ್ತಿರುವ ಎಂಟು ವರ್ಷಗಳ ಪ್ರಾಥಮಿಕ ಮಾಧ್ಯಮಿಕ ವಿದ್ಯಾಭ್ಯಾಸವನ್ನು ಬೇರೆಯಾಗಿ ಪರಿಗಣಿಸಿದರೆ, ಈ ಎಂಟು ವರ್ಷಗಳನ್ನೂ ಪ್ರಾಥಮಿಕ ವಿದ್ಯಾಭ್ಯಾಸವೆಂದು ಮಾಡಿದರೂ ಚಿಂತೆಯಿಲ್ಲ, ಅವಧಿಯನ್ನು ಮಾತ್ರ ಕಡಮೆ ಮಾಡಬಾರದು. ಮದರಾಸ್ ಸರ್ಕಾರದವರು ಇದನ್ನು ಎಲಿಮೆಂಟರಿ ಎಂದು ಕರೆಯುತ್ತಾರೆ. ಮೊದಲು ಇಲ್ಲಿ ಇದ್ದುದು ಪ್ರಾಥಮಿಕ ನಾಲ್ಕು ವರ್ಷ, ಮಾಧ್ಯಮಿಕ ನಾಲ್ಕು ವರ್ಷ. ರಾಜ್ಯಾಂಗದಲ್ಲಿ ಹೇಳಿರುವ ಹಾಗೆ ಎಂಟು ವರ್ಷಗಳ ಕಾಲ ಪ್ರಜೆಗಳೆಲ್ಲರಿಗೂ ವಿದ್ಯಾಭ್ಯಾಸ ಯಾವ ಶುಲ್ಕವೂ ಇಲ್ಲದೆ ದೊರೆಯಬೇಕು. ಇದನ್ನು ಮೈನೂರಿನಲ್ಲಿ ಅನೇಕ ವರ್ಷಗಳಿಂದ ಜಾರಿಯಲ್ಲಿ ತಂದಿದ್ದಾರೆ. ಈಗ ಇದನ್ನು ಬದಲಾಯಿಸುವುದಕ್ಕೆ ಪ್ರಬಲವಾದ ಕಾರಣ ವಿಲ್ಲವೆಂದು ನನ್ನ ಅಭಿಪ್ರಾಯ. ಆದರೆ ವಿದ್ಯಾಭ್ಯಾಸ ಸುಧಾರಣಾ ಸಮಿತಿಯವರು ಕೆಲವು ಕಾರಣಗಳನ್ನು ಕೊಟ್ಟಿದ್ದಾರೆ. ಆ ಕಾರಣಗಳನ್ನು ವಿಮರ್ಶಿಸಿದರೆ, ಪ್ರಾಯಶಃ ಅವು ಅಷ್ಟು ಪ್ರಬಲವಾದ ಕಾರಣಗಳಲ್ಲ ವೆಂದು ನನ್ನ ಅಭಿಪ್ರಾಯವೆಂದು ಅರಿಕೆ ಮಾಡಿಕೊಳ್ಳುತ್ತೇನೆ. ಅವರು ಕೊಟ್ಟಿರುವ ಕಾರಣಗಳನ್ನು ಸ್ಥೂಲವಾಗಿ ವಿಮರ್ಶೆಮಾಡುವುದಾದರೆ, ಅವರು ಕೊಟ್ಟಿರುವ ಒಂದು ಕಾರಣ, ಸಾಮಾನ್ಯವಾಗಿ ಪ್ರಾಥಮಿಕ ವಿದ್ಯಾಭ್ಯಾಸ ಮಾಡುವವರ ಸಂಖ್ಯೆಯಲ್ಲಿ ಬಹುಭಾಗ ಅದರಲ್ಲಿಯೂ ಹಳ್ಳಿಯವರಲ್ಲಿ ಪ್ರಾಥಮಿಕ ಶಾಲೆಯಲ್ಲಿ ಓದದೇಯಿರುವುದರಿಂದ, ಇವರು ವಿದ್ಯಾಭ್ಯಾಸವನ್ನು ಬಿಟ್ಟು ಓದಿರುವುದನ್ನೂ ಮರೆಯುತ್ತಾರೆ. ಈ ಒಂದು ಕಾರಣವನ್ನು ಕೊಟ್ಟು 'ಸಾಧ್ಯವಾದಷ್ಟು ಈ ಪ್ರಾಥಮಿಕ ವಿದ್ಯಾಭ್ಯಾಸದ ಕಾಲಾವಧಿಯನ್ನು ಹೆಚ್ಚುಮಾಡಬೇಕು; ಆದುದರಿಂದ ಆರು ವರ್ಷಕಾಲ ಈ ವಿದ್ಯಾಭ್ಯಾಸವಿದ್ದರೆ ಹಳ್ಳಿಯವರು ಓದುತ್ತಾರೆ' ಎಂದು ಒಂದು ಕಾರಣವನ್ನು ಹೇಳಿದ್ದಾರೆ. ಇವರ ಕಾರಣಗಳು ಅಷ್ಟು ಪ್ರಬಲವಾಗಿಲ್ಲವೆಂದು ತಿಳಿದುಕೊಂಡಿದ್ದೇನೆ. ವಿದ್ಯಾರ್ಥಿಗಳು ಒಂದು ಸಾರಿ ಪ್ರಾಥಮಿಕ ಶಾಲೆಗೆ ಸೇರಿದರೆ ನಾಲ್ಕು ವರ್ಷಕಾಲ ಅವರಿಗೆ ಸರಿಯಾದ ವಿದ್ಯಾಭ್ಯಾಸ ದೊರೆತರೆ, ಶಾಲೆಯಲ್ಲಿ ತರಹೇತಾದ ಉಪಾಧ್ಯಾಯರಿದ್ದರೆ. ಬೇಕಾದ ಸಲಹೆ ಸಲಕರಣೆಗಳನ್ನೊದಗಿಸಿದರೆ, ಸಾಕಷ್ಟು ವಿದ್ಯಾವಂತರಾಗುತ್ತಾರೆ. ನಾಲ್ಕು ವರ್ಷ ಓದಿದ ನಂತರ ಪುನಃ ಅವರು ಅವಿದ್ಯಾವಂತರಾಗುವುದಕ್ಕೆ ಅವಕಾಶವಿರುವುದಿಲ್ಲ. ಈ ವರದಿಯಲ್ಲಿ ಬಂದಿರುವ ಅಂಕಿ ಅಂಶಗಳನ್ನು ನೋಡಿದರೆ ಮೊದಲು ಹುಡುಗರು ಶಾಲೆಗೆ ಸೇರಿದರೆ ಅವರು ಎರಡು ವರ್ಷದ ನಂತರ ವರ್ಷಗಳಿಗೆ ಹೋಗುವುದೇ ಕಷ್ಟವಾಗಿದೆ. ಅನೇಕ ಶಾಲೆಗಳಲ್ಲಿ ಇಬ್ಬರು ಉಪಾಧ್ಯಾಯರೂ ಇಲ್ಲದೇಯಿರುವುದರಿಂದ ಅಲ್ಲಿ ನಾಲ್ಕು ತರಗತಿಗಳನ್ನೂ ಇಟ್ಟುಕೊಳ್ಳುವುದಕ್ಕೆ ಅವಕಾಶವಿಲ್ಲ, ಒಂದೋ ಎರಡೋ ತರಗತಿಗಳಿರುತ್ತವೆ. ನಾನು ಮೊದಲೇ ಹೇಳಿದ ಹಾಗೆ, ನಮ್ಮಲ್ಲಿ ತರಹೇತಾದ ಉಪಾಧ್ಯಾಯರ ಸಂಖ್ಯೆ ಕಡಮೆ, ತರಹೇತಿಲ್ಲದ ಉಪಾಧ್ಯಾಯರೇ ಹೆಚ್ಚು. ಸುಮಾರು ಆರು ಸಾವಿರ ಪ್ರೈಮರಿ ಶಾಲೆಗಳಲ್ಲಿ ಒಂದೊಂದು ಶಾಲೆಗೆ ಒಬ್ಬರೇ ಉಪಾಧ್ಯಾಯರಿರುತ್ತಾರೆ. ಈ ಕಾರಣದಿಂದ ಹುಡುಗರು ಸರಿಯಾಗಿ ವಿದ್ಯಾವಂತರಾಗಲು ಅವಕಾಶವಾಗಿಲ್ಲ. ಒಂದು ಸಾರಿ ಪಾಠಶಾಲೆಗೆ ಸೇರಿ ಒಂದೆರಡು ವರ್ಷಗಳು ಓದಿ ಅನಂತರ ಬಿಟ್ಟು ಬಿಡುತ್ತಾರೆ ಎಂಬುದಕ್ಕೆ ಅಂಕಿ ಅಂಶಗಳನ್ನು ಸಂಗ್ರಹಮಾಡಿ ಹೇಳಿಲ್ಲ.

ಈ ಸಮಯದಲ್ಲಿ ಇನ್ನೊಂದಂಶವನ್ನು ಹೇಳಬೇಕಾಗಿದೆ. ಶಿಕ್ಷಣ ಸುಧಾರಣಾ ಸಮಿತಿಯವರು ಸ್ವಲ್ಪ ಕಷ್ಟಪಟ್ಟು ಇನ್ನೂ ಹೆಚ್ಚಿನ ಅಂಕಿ ಅಂಶಗಳನ್ನು ಸಂಗ್ರಹಿಸಿದ್ದರೆ ಚೆನ್ನಾಗಿತ್ತು. ನಮ್ಮ ದೇಶದಲ್ಲಿ ಒಂದೊಂದು ಪಾಠಶಾಲೆಯಲ್ಲಿ ಎಷ್ಟೆಷ್ಟು ವಿದ್ಯಾರ್ಥಿಗಳಿದ್ದಾರೆ, ಎಷ್ಟೆಷ್ಟು ಉಪಾಧ್ಯಾಯರಿದ್ದಾರೆ, ಯಾವ ಯಾವ ಶಾಲೆಗಳಿಗೆ ಏನೇನು equipment ಇದೆ, ಏನೇನು ಬೇಕಾಗಿದೆ, ಕಟ್ಟಡಗಳಿಲ್ಲದೇಯಿರುವ ಸ್ಕೂಲುಗಳೆಷ್ಟು, ಹೊಸ ಕಟ್ಟಡಗಳಿಗೆ ಬೇಕಾಗಿರುವದೆಷ್ಟು, ಹೊಸಯೋಜನೆಯ ಪ್ರಕಾರ ಎಷ್ಟು ಕಟ್ಟಡಗಳು ಬೇಕಾಗುತ್ತವೆ, ಮುಂತಾದ ಅಂಕಿ ಅಂಶಗಳು ನಮ್ಮ ಮುಂದಿಲ್ಲ. ಸಮಿತಿಯವರಾದರೂ ಇದನ್ನೆಲ್ಲಾ ವಿಚಾರಿಸಿದರೋ ಇಲ್ಲವೋ ಗೊತ್ತಿಲ್ಲ, ಇದಕ್ಕೆ ಒಂದು Committee of Enquiry ಎಂದು ಏರ್ಪಾಡು ಮಾಡಿದ್ದರೆ ಚೆನ್ನಾಗಿತ್ತು. ಇದನ್ನು ಒಂದು Expert Committee ಎಂದು ಮಾಡಿದ್ದೆವು ಎಂದು ಹೇಳುವುದಾದರೆ, ಇದರಲ್ಲಿ 39 ಜನರು ಇರುವುದಕ್ಕೆ ಬದಲಾಗಿ ಪರಿಣತರಿಂದ ಕೂಡಿದ ಒಂದು ಸಣ್ಣ ಸಮಿತಿಯನ್ನು ಮಾಡಿದ್ದರೆ, ಅವರು ಅನೇಕ ಪಾಠಶಾಲೆಗಳನ್ನು ಪ್ರತ್ಯಕ್ಷವಾಗಿ ನೋಡಿ ಅಲ್ಲಲ್ಲಿರುವ ಸಲಕರಣೆಗಳು ಸೌಲಭ್ಯಗಳು ಎಲ್ಲವನ್ನೂ ನೋಡಿ ಹೆಚ್ಚಿನ ಅಂಕಿ ಅಂಶಗಳನ್ನು ಸಂಗ್ರಹಿಸಿಕೊಂಡಿದ್ದರೆ ವಿಮರ್ಶೆಮಾಡುವುದಕ್ಕೆ ಸುಲಭವಾಗುತ್ತಿತ್ತು ಎಂದು ಆಗಲೇ ಹೇಳಿದ್ದಾರೆ. ಒಂದು ವೇಳೆ ಗ್ರಾಮಾಂತರ ಪ್ರದೇಶಗಳಲ್ಲಿ ವಿದ್ಯಾರ್ಥಿಗಳಿಗೆ ಹೆಚ್ಚು ಕಾಲ ವಿದ್ಯಾಭ್ಯಾಸ ಮಾಡಲು ಅವಕಾಶವಿರಬೇಕೆಂಬ ಉದ್ದೇಶವಿದ್ದಿದ್ದರೆ ಪ್ರಾಥಮಿಕ ವಿದ್ಯಾಭ್ಯಾಸ ಐದು ವರ್ಷ, ಮಾಧ್ಯಮಿಕ ವಿದ್ಯಾಭ್ಯಾಸ ಮೂರು ವರ್ಷ ಎಂದು ಮಾಡಬಹುದಾಗಿತ್ತು. ಹಿಂದೆ ಈ ಕ್ರಮವಿತ್ತು. ಅದನ್ನು ಬದಲಾಯಿಸಿ ನಾಲ್ಕು ವರ್ಷ ಮಾಡಿದರು. ಆಮೇಲೆ ವಿದ್ಯಾಭ್ಯಾಸದ ಅವಕಾಶವು ಪ್ರಾಥಮಿಕ ವಿದ್ಯಾಭ್ಯಾಸವನ್ನು ಪುನಃ ಐದು ವರ್ಷ ಮಾಡಬೇಕೆಂದು ಸಲಹೆಮಾಡಿದ್ದರು,

ಪ್ರಾಥಮಿಕ ವಿದ್ಯಾಭ್ಯಾಸ ಐದು ವರ್ಷವಿದ್ದುದಲ್ಲದೆ, ಮಾಧ್ಯಮಿಕ ಶಾಲೆಯ ಅವಧಿ ನಾಲ್ಕು ವರ್ಷವಿತ್ತು.

ಶ್ರೀ ಎ. ಜಿ. ರಾಮಚಂದ್ರರಾವ್ (ನ್ಯಾಯಾಂಗ ಮತ್ತು ವಿದ್ಯಾ ಇಲಾಖೆಗಳ ಮಂತ್ರಿಗಳು).—ಹಿಂದೆ ಇದ್ದುದು ಮೂರು ವರ್ಷ ಎಲಿಮೆಂಟರಿ, ಐದು ವರ್ಷ ಮಾಧ್ಯಮಿಕ.

ಶ್ರೀ ಟಿ. ಮರಿಯಪ್ಪ.—ಎರಡು ರೀತಿಯೂ ಇತ್ತು. ಹೆಚ್ಚಾಗಿ ವಿದ್ಯಾವಂತರಾಗದೇಯಿರುವುದಕ್ಕೆ ಕಾರಣಗಳನ್ನು ಸಮಿತಿಯವರು ಕೊಟ್ಟಿದ್ದಾರೆ. ತರಪೇತಾದ ಉಪಾಧ್ಯಾಯರಿಲ್ಲದಿರುವುದು ಒಂದು, ಪಾಠಶಾಲೆಗಳಲ್ಲಿ ಹುಡುಗರ ಸಂಖ್ಯೆ ಜಾಸ್ತಿಯಾಗಿರುವುದು ಒಂದು.

> "Low qualification of teachers, their inadequate training and inadequate pay are perhaps the most serious causes responsible for the large amount of wastage in primary education. Finance has always been the great problem."

ಈ ರೀತಿ ತಿಳಿಸಿದ್ದಾರೆ. ಪ್ರಾಮುಖ್ಯವಾದ ಕಾರಣ low qualification of teachers and inadequate pay ಎಂದು ಹೇಳಿದ್ದಾರೆ. ಈ ಸಮಿತಿಯವರ ವರದಿಯಲ್ಲಿ ಸೂಚಿಸಿರುವ ಅಭಿಪ್ರಾಯದ ಪ್ರಕಾರ ಪ್ರಾಥಮಿಕ ವಿದ್ಯಾಭ್ಯಾಸದ ಅವಧಿಯಲ್ಲೇ ಹೆಚ್ಚಾಗಿ ದೇಶಕ್ಕೆ ಹಣದ ನಷ್ಟವುಂಟಾಗುತ್ತಿರುವುದು. ಹಣದ ಅಭಾವದಿಂದ, ಸರಿಯಾಗಿ ತರಪೇತಾದ ಉಪಾಧ್ಯಾಯರಿಲ್ಲದಿರುವುದಲ್ಲದೆ ತರಗತಿಗಳಲ್ಲಿ overcrowding ಕೂಡ ಇದೆ ಮತ್ತು ಕಟ್ಟಡಗಳಿಲ್ಲದಿರುವುದು ಮತ್ತೊಂದು ಕಾರಣ ಎಂಬುದನ್ನೂ ಸೂಚಿಸಿದ್ದಾರೆ. ಇದಕ್ಕಾಗಿ shortness of course and unreality of curriculum ಮಾಡಿದರೆ ಅನುಕೂಲವೆಂದು ಹೇಳಿದ್ದಾರೆ. ಹೀಗೆ ಪ್ರಾಥಮಿಕ ವಿದ್ಯಾಭ್ಯಾಸದ ಅವಧಿಯನ್ನು ಆರು ವರ್ಷ ಮಾಡಿದರೆ ಏನು ಪ್ರಯೋಜನವಾಗುತ್ತದೆಂಬುದನ್ನು ವರದಿಯಲ್ಲಿ ಸೂಚಿಸಿದ್ದಾರೆ. ಇಷ್ಟು ನಿಜ, ಈಗಿರತಕ್ಕ ಪ್ರಾಥಮಿಕ ಮತ್ತು ಮಾಧ್ಯಮಿಕ ವಿದ್ಯಾಭ್ಯಾಸದ ಅವಧಿ ಇವರು ಸೂಚಿಸಿರುವುದಕ್ಕಿಂತ ಜಾಸ್ತಿಯಾಗಿದೆ. ಮತ್ತೊಮ್ಮೆ ನಾನು ಸರ್ಕಾರದವರಿಗೆ ಸಲಹೆ ಮಾಡುವುದೇನೆಂದರೆ, ದಯವಿಟ್ಟು ಈ ಅವಧಿಯನ್ನು ಕಡಮೆಮಾಡಬೇಡಿ, ಈಗಿರುವ ಈ ಸೌಲಭ್ಯವನ್ನು ವಿದ್ಯಾರ್ಥಿಗಳ ಸಂಖ್ಯೆಯನ್ನು ಬೇರೆಮಾರ್ಗದಿಂದ ಹೆಚ್ಚಿಸಲು ಅವಕಾಶವಿದೆ.

ಶ್ರೀ ಎ. ಭೀಮಪ್ಪನಾಯಕ್ (ಮೊಳಕಾಲ್ಮೂರು).—ಎಂಟುವರ್ಷಗಳಲ್ಲಿ ಎಷ್ಟು periods ಇವೆಯೋ ಆರು ವರ್ಷಗಳಲ್ಲಿಯೂ ಅಷ್ಟೇ periods ಇರುವಂತೆ ಮಾಡಿದ್ದೇವೆಂದು ಹೇಳಿದರೆ, ಅದಕ್ಕೇನು ಜವಾಬು ಹೇಳುತ್ತೀರಿ?

ಶ್ರೀ ಟಿ. ಮರಿಯಪ್ಪ.—ನಾವು ಮಾತನಾಡುತ್ತಿರುವುದು ಪ್ರಾಥಮಿಕ ಮತ್ತು ಮಾಧ್ಯಮಿಕ ವಿದ್ಯಾಭ್ಯಾಸದ ವಿಚಾರ. ಇದರಲ್ಲಿ ಆರೀತಿ ಮಾಡಿದರೆ, ನೀರಿಳಿಯದೇಯಿರುವ ಗಂಟಲಿಗೆ ಕಡಬುಹಾಕಿದ ಹಾಗಾಗುತ್ತದೆ. ಸಣ್ಣ ಮಕ್ಕಳಿಗೆ ಮೃದುವಾಗಿ, ಸುಲಭವಾಗಿ ಹಿಡಿಯುವಂತೆ, ನಿಧಾನವಾಗಿ ತರಪೇತು ಕೊಡುವ ಕಾಲ; ಅವರ ಮನಸ್ಸಿಗೆ ಎಷ್ಟು ಹಿಡಿಯಬಹುದೋ ಅಷ್ಟು ಮಾತ್ರ ಕೊಟ್ಟು ತಯಾರುಮಾಡಬೇಕಾಗಿದೆ. ಆದುದರಿಂದ ಆ ಕಾಲದಲ್ಲಿ ಅವರಿಗೆ ಎಲ್ಲವನ್ನೂ ಒಟ್ಟಿಗೆ ತುಂಬುತ್ತೇವೆ ಎಂದರೆ, ಗಣೇಶನನ್ನುಮಾಡು ಎಂದರೆ ಗಣೇಶನ ಅಪ್ಪನನ್ನುಮಾಡಿದ ಹಾಗಾಗುತ್ತದೆ. ಆ ಗೋಜಿಗೆ ಹೋಗಬಾರದು. ಪ್ರಾಯಶಃ ಸರ್ಕಾರದ ಅಭಿಪ್ರಾಯವೂ ಹಾಗಿಲ್ಲವೆಂದು ತಿಳಿದುಕೊಂಡಿದ್ದೇನೆ.

ಅವಧಿಯ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದೆ. ಎಂಟು ವರ್ಷದ ಅವಧಿಯನ್ನು ಪೋತಾಮಾಡಿ ಆರು ವರ್ಷಕ್ಕಿಳಿಸಿದೆ. ಹೈಸ್ಕೂಲಿಗೆ ನಾಲ್ಕು ವರ್ಷ ಮಾಡಿದ್ದೀರಿ. ಹೈಸ್ಕೂಲಿಗೆ ಒಂದು ವರ್ಷ ಜಾಸ್ತಿ ಆಗಿದೆ, ಇದನ್ನುನಾನು ಒಪ್ಪುತ್ತೇನೆ. ಅಮೆರಿಕಾದಲ್ಲಿ ಹೈಸ್ಕೂಲು ಕೋರ್ಸು ನಾಲ್ಕು ವರ್ಷವಿದೆ, ಇದು ನಾಲ್ಕುವರ್ಷ ಇರುವುದು ಬಹಳ ಅಗತ್ಯವೆಂದು ಡಾ॥ ಸಿ. ಆರ್. ರೆಡ್ಡಿಯವರೂ ಸೂಚನೆಕೊಟ್ಟಿದ್ದಾರೆ. ಆದರೆ ಸರ್ಕಾರದವರು ಹೈಸ್ಕೂಲು ಶಿಕ್ಷಣ ನಾಲ್ಕು ವರ್ಷ ಇರಬೇಕೆಂದು ಹೇಳಿಲ್ಲ, ಸಮಿತಿಯವರೂ ಕಡ್ಡಾಯವಾಗಿ ಹೇಳಿಲ್ಲ. ಅವರ ಉದ್ದೇಶವೆಲ್ಲಾ ಮಾಧ್ಯಮಿಕ ಶಾಲೆಯ ಎರಡು ವರ್ಷವನ್ನು ಪ್ರಾಥಮಿಕ ಶಾಲೆಗೆ ಸೇರಿಸುತ್ತೇವೆ, ಇನ್ನೆರಡು ವರ್ಷದಲ್ಲಿ ಒಂದು ವರ್ಷ ಪೋತಾಮಾಡಿ ಬಾಕಿ ಒಂದು ವರ್ಷವನ್ನು ಹೈಸ್ಕೂಲಿಗೆ ಸೇರಿಸುತ್ತೇವೆ ಎನ್ನುತ್ತಾರೆ. ಇದರಲ್ಲೇ ನನಗೆ ಭಿನ್ನಾಭಿಪ್ರಾಯವಿರುವುದು. ಡಾ॥ ಸಿ. ಆರ್. ರೆಡ್ಡಿಯವರು ಹೀಗೆ ಹೇಳಿದ್ದಾರೆ:

> "*High School Stage.*—This is one of three years and there is probably something to be said for extending this by one year. The advantages are so obviously on the surface that there is no need to detail them; for example, this will be the training ground for the vast mass of the class of persons, known as technicians, constituting the backbone of the country's industrial organisation. But the difficulties are equally clear. The object of the work done at this stage is naturally two-fold: one, to prepare such of the pupils as have an aptitude and have, besides at their disposal, the necessary financial resources, for entering into a University grade of higher education: the second to prepare for entry into life those who desire, for any reason, to enter into life and follow a profession without an unduly long further period of training, except what may be required, if at all, to give full confidence to the boys and girls in themselves such as may be gained in a purely technical institute or as apprentices or as beginners in a works establishment."

ಆದುದರಿಂದ ಹೈಸ್ಕೂಲು ವಿದ್ಯಾಭ್ಯಾಸವನ್ನು ಪ್ರೈಮರಿ ವಿದ್ಯಾಭ್ಯಾಸ ಎಂಟು ವರ್ಷದ ಜೊತೆಗೆ ನಾಲ್ಕು ವರ್ಷ ಇಡುತ್ತೇವೆಂದು ಸಮಿತಿಯವರು

(ಶ್ರೀ ಟಿ. ಮರಿಯಪ್ಪ.)

ಹೇಳಿದರೆ ಅದಕ್ಕೆ ನನ್ನ ಸಂಪೂರ್ಣ ಅನುಮೋದನೆ ಇದೆ. ಇದು ಬಹಳ ಸೂಕ್ತ. ಅಮೆರಿಕಾದಲ್ಲಿ ಎಂಟು ವರ್ಷ ಆದಮೇಲೆ ನಾಲ್ಕು ವರ್ಷ ಹೈಸ್ಕೂಲು ಶಿಕ್ಷಣವಿದೆ. ಇಲ್ಲಿಯೂ ಹಾಗೆಯೇ ಮಾಡುವುದು ಸೂಕ್ತ. ಈಗ ಒಟ್ಟು 11 ವರ್ಷ ಇರುವುದನ್ನು ಖೋತಾಮಾಡಿ ಒಂದು ವರ್ಷ ಕಡಮೆಮಾಡುವುದಕ್ಕಿಂತ ಇನ್ನೂ ಒಂದು ವರ್ಷ ಹೆಚ್ಚುಮಾಡಿ 12 ವರ್ಷ ಮಾಡಿದರೆ ಹುಡುಗರಿಗೆ ಇನ್ನೂ ಹೆಚ್ಚು ತರಹೇತು ದೊರಕುತ್ತದೆ. ಈ ಸಮಿತಿಯ ವರದಿಯನ್ನು ಪರಿಶೀಲಿಸಿದಾಗ ಒಂದು ವಿಷಯ ಹೊಳೆಯುತ್ತದೆ. ಸಾಧ್ಯಶಃ ಸರ್ಕಾರದವರು ಹೊರಬೇಕಾದ ಹೆಚ್ಚು ಖರ್ಚನ್ನು ಖೋತಾಮಾಡಿ ಉಳಿಸತಕ್ಕ ಉದ್ದೇಶದಿಂದ 11 ವರ್ಷದ ಅವಧಿಯನ್ನು 10 ವರ್ಷಕ್ಕೆ ಇಳಿಸಿದ್ದಾರೆಯೋ ಏನೋ ಎಂಬ ಶಂಕೆ ಹುಟ್ಟುತ್ತದೆ. ಈ ಶಂಕೆ ನಿಜವಾಗಿದ್ದರೆ, ಈ ಉದ್ದೇಶವಿದ್ದರೆ, ಇದು ಒಳ್ಳೆಯದಲ್ಲ. ಭಾವೀಪ್ರಜೆಗಳನ್ನು ತಯಾರು ಮಾಡುವ ಜವಾಬ್ದಾರಿ ಪ್ರಜಾನಕರ್ಾರದ ಮತ್ತು ಮುಖಂಡರಮೇಲಿದೆ. ಪ್ರಜೆಗಳು ನರಿಯಾಗಿ ತಯಾರಾಗಬೇಕಾದರೆ, ದೇಶದಲ್ಲಿ ಏನೊಂದು ವಿಧ ಅಥವಾ ವ್ಯವಸ್ಥೆ ಜಾರಿಯಲ್ಲಿದೆಯೋ ಅದನ್ನು ಬೇಕಾದಾಗ ಬದಲಾವಣೆ ಮಾಡತಕ್ಕದ್ದು ನರಿಯಲ್ಲ. ಇದು ಅನೇಕ ವರ್ಷಗಳಕಾಲ ಜಾರಿಯಲ್ಲಿದೆ. ಇದರಲ್ಲಿ ಪ್ರಜೆಗಳಿಗೆ ಸೌಲಭ್ಯವಿದೆ. ಇದನ್ನು ಬದಲಾಯಿಸಿ, ಒಂದು ವರ್ಷ ಕಡಮೆಮಾಡಿ ಇದೇ ಶಿಕ್ಷಣವನ್ನು ಕೊಡುತ್ತೇವೆ ಎನ್ನುವುದು ಕಷ್ಟ. ಸರ್ಕಾರದವರು ಪರಿಶೀಲಿಸಿದರೆ, ಕಳೆದ ಆರೇಳು ವರ್ಷಗಳಿಂದ ವಿದ್ಯಾರ್ಥಿಗಳ ತಂಡ, ಪಾಠಶಾಲೆಗಳಿಗೆ ಬರುವ ವಿದ್ಯಾರ್ಥಿಗಳ ತಂಡ ಬಹಳ ಅಗಾಧವಾಗಿದೆ. ಇದನ್ನು ಅವರೇ ಒಪ್ಪಿದ್ದಾರೆ: 'there is an inconvenient increase in the number of students coming to the schools and colleges'.

4-30 P. M.

ಗ್ರಾಮಾಂತರ ಪ್ರದೇಶಗಳಿಗೆ ಸಾಕಷ್ಟು ಪಾಠಶಾಲೆಗಳಿರುವುದಿಲ್ಲವೆಂದು ಸರ್ಕಾರದವರನ್ನು ಇಂದಿಗೂ ಜನರು ಒತ್ತಾಯಪಡಿಸುತ್ತಲೇ ಇದ್ದಾರೆ. ಆಬಗ್ಗೆ ಸರ್ಕಾರದವರು ಸಾಧ್ಯ ಪ್ರಯತ್ನವನ್ನು ನಡೆಸುತ್ತಲೇ ಬಂದಿದ್ದಾರೆ. ಆದರೆ ಈಗ ಎಷ್ಟೋ ಗ್ರಾಮಗಳಲ್ಲಿ ಪಾಠಶಾಲೆಗಳಿರುವಂತೆ ಹುಡುಗರನ್ನು ಪಾಠಶಾಲೆಗಳಿಗೆ ಕಳುಹಿಸಿಕೊಡಬೇಕೆಂದು ಬಲವಂತಪಡಿಸುತ್ತಿದ್ದರೂ ಆ ಹುಡುಗರ ತಂದೆ ತಾಯಿಗಳು ಕಳುಹಿಸಿಕೊಡುತ್ತಿಲ್ಲ. ಇದಕ್ಕೆ ಮುಖ್ಯ ಕಾರಣಗಳು ಅವರಲ್ಲಿರುವ ತಕ್ಕ ಅಜ್ಞಾನ ಮತ್ತು ಬಡತನ. ಆದರೆ ಈಗ ಆವರಲ್ಲಿದ್ದ ಅಜ್ಞಾನ ಮಾತ್ರ ಹೋಗಿದೆ. ಆದರೆ ಬಡತನ ಇನ್ನೂ ಇದ್ದೇ ಇದೆಯೆಂಬುದನ್ನು ನಾನೂ ಒಪ್ಪಿಕೊಳ್ಳುತ್ತೇನೆ. ಆದುದರಿಂದಲೇ ಬಡವರ ಮಕ್ಕಳಿಗೆ ಸರ್ಕಾರದವರು ಅನೇಕ ಸೌಲಭ್ಯಗಳನ್ನು ಕಲ್ಪಿಸಿಕೊಟ್ಟಿದ್ದಾರೆ. ಆದರೆ ವಿದ್ಯಾವಂತರಾಗಿರತಕ್ಕವರ ಹೈಕಿ ಬಡವರ ಮಕ್ಕಳೇ ಜಾಸ್ತಿ ಇದ್ದಾರೆ. ಪಾಠಶಾಲೆಗಳಿಗೆ ವ್ಯಾಸಂಗ ಮಾಡಲು ಬರತಕ್ಕವರಲ್ಲಿ ಬಡವರ ಮಕ್ಕಳೇ ಹೆಚ್ಚಾಗಿರುತ್ತಾರೆಂದು ಹೇಳಬಹುದು. ಆದುದರಿಂದ ಸೂಕ್ಷ್ಮವಾಗಿ ಈ ಬಗ್ಗೆ ಹೇಳುವುದಾದರೆ ಈಗ ಇದ್ದ ಪ್ರಾಥಮಿಕ ವಿದ್ಯಾಭ್ಯಾಸದ ಮತ್ತು ಮಾಧ್ಯಮಿಕ ವ್ಯಾಸಂಗದ ಅವಧಿಯನ್ನು ಬದಲಾಯಿಸುವುದು ಅಷ್ಟು ಸರಿಯಾಗಿಲ್ಲವೆಂದು ಹೇಳಬೇಕಾಗಿದೆ. ಆದರೆ ಈ ವರದಿಯಲ್ಲಿ ಹಣಕಾಸಿನ ಕೊಂದರೆಯಿಂದ ಪ್ರಾಥಮಿಕ ವಿದ್ಯಾಭ್ಯಾಸದ ಅವಧಿಯನ್ನು ತಗ್ಗಿಸಿ ಹೈಸ್ಕೂಲು ವಿದ್ಯಾಭ್ಯಾಸದ ಅವಧಿಯನ್ನು ಹೆಚ್ಚಿಸಿರುವಂತೆ ಸೂಕ್ಷ್ಮವಾಗಿ ತಿಳಿಸಲಾಗಿದೆ. ಆದರೆ ಹಾಗೆ ಹಣಕಾಸಿನ ಕೊರತೆಯಿಲ್ಲವೆಂದೇನೂ ನಾನು ಹೇಳುವುದಿಲ್ಲ. ಆದರೆ ಆ ಒಂದು ದೃಷ್ಟಿಯಿಂದಲೇ ಈಗ ಜಾರಿಯಲ್ಲಿರುವ ಪ್ರಾಥಮಿಕ ವಿದ್ಯಾಭ್ಯಾಸದ ಅವಧಿಯನ್ನು ಮೂಲ ಶಿಕ್ಷಣ ಅವಧಿಗೆ ಹೊಂದಿಸಿಕೊಂಡು 8 ವರ್ಷಗಳಿದ್ದುವನ್ನು ಎಂದರೆ ಪ್ರಾಥಮಿಕ 4 ವರ್ಷ, ಮಾಧ್ಯಮಿಕ 4 ವರ್ಷ, ಈ ಅವಧಿಯನ್ನು ಈಗ 6 ವರ್ಷಗಳಿಗೆ ಇಳಿಸಬೇಕೆಂದು ಹೇಳಿದ್ದಾರೆ. ಆದರೆ ಹಿಂದೆಯೇ ಪ್ರಾಜ್ಞರಾಗಿದ್ದವರು ಈ ಅವಧಿಯನ್ನು ನಿರ್ಧಾರ ಮಾಡಿದ್ದಾರೆ. ಆದ ಪ್ರಯುಕ್ತ ಇಷ್ಟುಕಾಲ ಅವರಿಗೆ ಅಗತ್ಯವಾಗಿ ಬೇಕೇ ಬೇಕು. ಇದನ್ನು ಹೀಗೆ ಬದಲಾವಣೆ ಮಾಡುವುದು ಸೂಕ್ತವಲ್ಲವೆಂತಲೇ ನನ್ನ ಅಭಿಪ್ರಾಯ ಆದರೆ ಹಣದ ಅಭಾವದಿಂದಲೇ ಹೀಗೆ ಮಾಡಲಾಗಿದೆಯೆಂದು ಗೊತ್ತಾಗುತ್ತಿದೆ. ಹಾಗೆ ಹಣದ ಅಭಾವ ಇದೆ ಎಂಬ ಒಂದು ಕಾರಣದಮೇಲೆ ಈ ಅವಧಿಯನ್ನು ಹಣದ ಅನುಕೂಲತೆ ಒದಗಿದಂತೆ 6 ವರ್ಷಗಳಿಂದ, 7 ವರ್ಷಗಳಿಗೂ, ಅನಂತರ 8 ವರ್ಷಗಳಿಗೂ ಹೆಚ್ಚು ಮಾಡಲು ಅವಕಾಶ ಕಲ್ಪಿಸಿಕೊಂಡಿದೆಯೆಂದು ಹೇಳಿರುವುದು, ರಾಜ್ಯಾಂಗದವಿಧಿಗೆ ಅನುಸಾರವಾಗಿ ಪ್ರಜೆಗಳಿಗೆ ಒದಗಿಸಬೇಕಾದ ಸೌಲಭ್ಯಗಳನ್ನು ಒದಗಿಸದೆ ಇರುವುದರ ಜೊತೆಗೆ, ಇದರಿಂದ ಒಂದು ಅನಾಮಲಕೂಡ ಆಗುತ್ತದೆಂದು ಹೇಳುತ್ತೇನೆ. ಆದುದರಿಂದ ಇದು ಅಷ್ಟು ಔಚಿತ್ಯವಲ್ಲವೆಂದು ಹೇಳಬೇಕಾಗಿದೆ. ಕೆಲವು ಹುಡುಗರಿಗೆ 6 ವರ್ಷ ಪಾಠ ಹೇಳುವುದು, ಮತ್ತೆ ಕೆಲವು ಹುಡುಗರಿಗೆ ಅದೇ ಪಾಠಗಳನ್ನು 8 ವರ್ಷಕಾಲ ಹೇಳುವುದೆಂದರೆ, ಕೆಲವು ಹುಡುಗರಿಗೆ ಇದರಿಂದ ಪ್ರಯೋಜನ ದೊರೆಯುವುದರಲ್ಲಿ ವ್ಯತ್ಯಾಸವಾಗಿ, ಅವರಿಗೆ ಜ್ಞಾನಾರ್ಜನೆಯಾಗುವುದರಲ್ಲೂ ಒಂದು ಸಮಾನಾಗಿಲ್ಲದೆ ಇದರಿಂದ ವ್ಯತ್ಯಾಸಹೊಂದಲು ಅವಕಾಶವಾಗಬಹುದು. ಇದರ ಜೊತೆಗೆ ತಾವು ಆ ವಿದ್ಯಾರ್ಥಿಗಳಿಗೆ ಪ್ರಾಥಮಿಕ ವಿದ್ಯಾಭ್ಯಾಸದ ಅವಧಿಯಲ್ಲೇ ಇಂಗ್ಲೀಷ್ ಅಭ್ಯಾಸವನ್ನೂ ಸಹ ಮಾಡಿಸುತ್ತೇವೆಂದು ಹೇಳಲಾಗಿದೆ. ಈಗ ಪ್ರಾಥಮಿಕ 4 ವರ್ಷ ಮತ್ತು ಮಾಧ್ಯಮಿಕ ವಿದ್ಯಾಭ್ಯಾಸದ 4 ವರ್ಷಗಳ ಅವಧಿಯಲ್ಲಿ ಅವರಿಗೆ ಇಂಗ್ಲೀಷ್ ಅಭ್ಯಾಸವನ್ನು ಪ್ರಾರಂಭಿಸುವುದಾಗಿದ್ದರೂ, ಅವರು ಹೈಸ್ಕೂಲಿಗೆ ಬಂದಾಗ ಎಷ್ಟೋ ತೊಂದರೆ ಅವರಿಗಿರುವಾಗ, ಇನ್ನು ತಾವು ಈಗ ಈ 4 ವರ್ಷಗಳ ಮಾಧ್ಯಮಿಕವನ್ನು ಕಿತ್ತುಹಾಕಿ, ಪ್ರಾಥಮಿಕ ಅವಧಿಯಲ್ಲೇ ಅವರಿಗೂ ಇಂಗ್ಲೀಷ್ ಅಭ್ಯಾಸವನ್ನೂ ಪ್ರಾರಂಭಿಸುತ್ತೇವೆಂದು ಹೇಳಿದರೆ ಅದರಿಂದೇನೂ ಅಷ್ಟು ಪ್ರಯೋಜನವಾಗಲಾರದು, ಮತ್ತು ಹುಡುಗರಿಗೂ ಸಹ ಹೈಸ್ಕೂಲಿಗೆ ಬಂದಾಗ ಅವರಿಗೆ ಅಲ್ಲಿನ ಅಭ್ಯಾಸಕ್ಕೆ ತುಂಬಾ ತೊಂದರೆಯಾಗುತ್ತದೆ. ತಮಗೆ ಸಾಧ್ಯವಾಗುವುದಾದರೆ ನಾಲ್ಕು ವರ್ಷಗಳಿರುವ ಈ ಪ್ರಾಥಮಿಕ ಅವಧಿಯನ್ನು 5 ವರ್ಷಗಳಿಗೆ ಹೆಚ್ಚಿಸಿದರೂ ಇನ್ನೂ ಬಹಳ ಒಳ್ಳೆಯದೆ. ಆದರೆ ತಾವೀಗ ಈ ಪ್ರಾಥಮಿಕಶಾಲೆಗಳಲ್ಲೇ ಇಂಗ್ಲೀಷ್ ಪಾಠಗಳನ್ನೂ ಪ್ರಾರಂಭಿಸಬೇಕಾದರೆ ಈಗ ಆ ಪಾಠಶಾಲೆಗಳಿಗೆಲ್ಲಾ 2-3 ಜನ ಉಪಾಧ್ಯಾಯರಂತೆ ನೇಮಕವಾಗಬೇಕಾದರೆ ಎಷ್ಟು ಜನ ಉಪಾಧ್ಯಾಯರು ಪ್ರತಿಯೊಂದು ಗ್ರಾಮಕ್ಕೂ ಬೇಕಾಗುತ್ತೆಂಬುದನ್ನು ತಾವು ಮುಖ್ಯವಾಗಿ ಆಲೋಚಿಸಬೇಕಾದಂಥ ಒಂದು ವಿಷಯ. ಈಗೇನೋ ಒಂದು ಮಾದರಿಯಲ್ಲಿ ವಿದ್ಯಾಭ್ಯಾಸ ಮುಂದುವರಿದುಕೊಂಡು

ಬರುತ್ತಿದೆ. ಇದರ ಜೊತೆಗೆ ತಾವು ಕಡ್ಡಾಯ ಶಿಕ್ಷಣವನ್ನು ಪ್ರತಿಯೊಬ್ಬ ದೇಶದಲ್ಲಿರುವ ಬಾಲಕನಿಗೂ ಒದಗಿಸುವುದೆಂದರೆ ಎಷ್ಟು ಕಷ್ಟವಾಗುತ್ತದೆ. ಆದುದರಿಂದ ಈಗ ಇರತಕ್ಕ ಒಂದು ಚೌಕಟ್ಟಿನಲ್ಲೇ ಸಾಧ್ಯವಾದ ಬದಲಾವಣೆಗಳನ್ನು ಮಾಡಿಕೊಳ್ಳಬೇಕಾಗಿದೆಯೇ ಹೊರತು ಈಗಿರತಕ್ಕ ಚೌಕಟ್ಟನ್ನು ಮುಂದುಹಾಕುವುದರಿಂದ ನಮಗೆ ಉಂಟಾಗತಕ್ಕ ಪ್ರಯೋಜನಗಳಿಗಿಂತಲೂ ನಷ್ಟವೇ ಜಾಸ್ತಿ ಎಂಬುದಾಗಿ ಎದ್ದು ಕಾಣುತ್ತಿದೆ.

ಶ್ರೀ ಟಿ. ಎಚ್. ಮೂಡಲಗಿರಿ ಗೌಡ (ಕಾಣಿಗಲ್ಲ್).—14 ವರ್ಷಗಳ ವಯಸ್ಸಿಗೆ ಬರುವತನಕ ಪ್ರತಿಯೊಬ್ಬ ವ್ಯಕ್ತಿಗೂ ಬಲಾತ್ಕಾರ ವಿದ್ಯಾಭ್ಯಾಸವನ್ನು ಕೊಡಬೇಕೆಂದು ಹೇಳಿಲ್ಲವೇ ?

ಶ್ರೀ ಟಿ. ಮರಿಯಪ್ಪ.—ಆ ಆರ್ಟಿಕರ್‌ನಲ್ಲಿ ಏನು ಪದಗಳನ್ನು ಉಪಯೋಗಿಸಿದ್ದಾರೆಂಬುದನ್ನು ತಿಳಿಸುತ್ತೇನೆ. 45 ನೆಯ ಆರ್ಟಿಕರ್‌ನಲ್ಲಿ ಹೀಗೆ ಇದೆ :—

> "The state shall endeavour to provide, within a period of ten years from the commencement of this Constitation for free and compulsory education for all children until they complete the age of fourteen years."

ಹೀಗೆ ಹೇಳಿರುವುದರಿಂದ ಜನರ ಮನಸ್ಸಿನಲ್ಲಿ ಇರುವಂಥ ಸಂಶಯಗಳನ್ನು ನಿವಾರಣೆಮಾಡಬೇಕಾದ್ದು ಆವಶ್ಯಕ. ಇದರಲ್ಲಿ ಪ್ರತಿಯೊಬ್ಬ ಬಾಲಕ, ಬಾಲಕಿಯರಿಗೆ ಅವರು 14 ವರ್ಷದ ವಯಸ್ಸಿಗೆ ಬರುವವರೆಗೂ ಅವರಿಗೆಲ್ಲಾ ಉಚಿತ ಮತ್ತು ಒತ್ತಾಯ ಶಿಕ್ಷಣವನ್ನು ಕಡ್ಡಾಯವಾಗಿ ಒದಗಿಸಬೇಕೆಂದು ಅಲ್ಲಿ ಹೇಳಲಾಗಿದೆ. ಹೀಗೆ ಆಗಬೇಕಾಗಿದ್ದರೆ ಈಗಿರುವ ಪದ್ಧತಿ ಪ್ರಕಾರ 4 ವರ್ಷ ಪ್ರಾಥಮಿಕ ವಿದ್ಯಾಭ್ಯಾಸ ಮತ್ತು 4 ವರ್ಷ ಮಾಧ್ಯಮಿಕ ಎಂದು ನಿರ್ಧಾರ ಮಾಡಿಕೊಂಡಿರುವುದು ಸರಿಯಾಗಿದೆ. ಆದರೆ ಒಂದುವೇಳೆ 4 ವರ್ಷ ಪ್ರಾಥಮಿಕಕ್ಕೆ ನಿಗದಿಮಾಡಿರುವ ಅವಧಿಯನ್ನು 5 ವರ್ಷಕ್ಕೆ ಏರಿಸಿ, ಮಾಧ್ಯಮಿಕವನ್ನು ಮೂರೇ ವರ್ಷಗಳಿಗೆ ನಿರ್ಧರಿಸಿದರೂ ನಿರ್ಧಾರಮಾಡಬಹುದು. ಅದಕ್ಕೆ ನಾನೂ ಸಹ ಒಪ್ಪಿಕೊಳ್ಳುತ್ತೇನೆ. ಹೀಗೆ ಮಾಡುವುದರಿಂದ ರಾಜ್ಯಾಂಗದಲ್ಲಿ ಹೇಳಿರುವ ಪ್ರಕಾರ ಪ್ರಜೆಗಳಿಗೆ ದತ್ತವಾಗಿ ಸಲ್ಲಬೇಕಾದ ಪ್ರಯೋಜನಗಳು ಅಥವಾ ಅವರಿಗೆ ಲಭ್ಯವಾಗಲೇಬೇಕೆಂದು ಹೇಳಿರುವ ಪ್ರಯೋಜನಗಳು ಅವರಿಗೆಲ್ಲಾ ತಪ್ಪದಂತೆ ಲಭಿಸಬೇಕು. ಇದೊಂದು ಬಹುಮುಖ್ಯವಾದ ವಿಷಯ.

ಇನ್ನು ವಿಶ್ವವಿದ್ಯಾನಿಲಯದ ವಿಚಾರವಾಗಿ ಅದರಲ್ಲಿ ಮಾಡತಕ್ಕ ಬದಲಾವಣೆಗಳೇನೂ ಇರುವುದಿಲ್ಲವೆಂದು ಹೇಳಿದ್ದಾರೆ. ಇದನ್ನು ನಾನೂ ಒಪ್ಪುತ್ತೇನೆ.

ಇನ್ನು, ಉಪಾಧ್ಯಾಯರುಗಳನ್ನು ತರಬೇತು ಮಾಡುವ ವಿಚಾರದಲ್ಲಿ ಅನೇಕ ಸಲಹೆಗಳನ್ನು ಸಮಿತಿಯವರು ಶಿಫಾರ್ಸುಮಾಡಿದ್ದಾರೆ. ಹಾಗೆ ನುರಿತ ಉಪಾಧ್ಯಾಯರನ್ನು ಒದಗಿಸಬೇಕಾದದ್ದು ಸರ್ಕಾರದವರ ಕರ್ತವ್ಯವೆಂಬುದನ್ನು ಅವರೇ ಒಪ್ಪಿಕೊಂಡಿದ್ದಾರೆ. ಆದರೆ ಈ ವಿಚಾರದಲ್ಲಿ ನಾನು ಸರ್ಕಾರದವರಿಗೊಂದು ಸಲಹೆ ನೀಡಬೇಕೆಂದಿದ್ದೇನೆ. ಈ ಪ್ರಾಥಮಿಕ, ಹೈಸ್ಕೂಲು ಮತ್ತು ಯೂನಿವರ್ಸಿಟಿ ಇತ್ಯಾದಿ ಎಲ್ಲ ವಿದ್ಯಾಭ್ಯಾಸದಲ್ಲಿಯೂ ಎಲ್ಲಾ ಅನುಕೂಲಗಳನ್ನೂ ಒಂದೇ ಸಲಕ್ಕೆ ಪಡಿಯಬೇಕೆಂದು ಹೊರಟರೆ ಅದು ಆಗದಮಾತು. ಹಾಗೆ ಒಂದೇ ಸಲಕ್ಕೆ ಅಪಾರವಾದ ಹೊರೆಯನ್ನು ಹೊರುವುದಕ್ಕೆ ಬದಲಾಗಿ ಸ್ವಲ್ಪ ಸ್ವಲ್ಪವಾಗಿ ಬದಲಾವಣೆಗಳನ್ನು ಮಾಡುತ್ತ ಹೋಗುವುದು ಒಳ್ಳೆಯದೆಂದು ನನಗೆನಿಸುತ್ತದೆ...

BUSINESS OF THE HOUSE AND HOURS OF SITTING.

Mr. SPEAKER.—The approved programme will be like this. If you approve of this, it will be printed tomorrow :

22nd July 1953	...	Bills left over and Andhra State Bill.	
23rd ,, ,,	...	Andhra State Bill.	
24th ,, ,,	...	do	
25th ,, ,,	...	do	
26th ,, ,,	...	Holiday	
27th ,, ,,	...	Andhra State Bill.	
28th ,, ,,	...	Discussion on Educational Reforms.	
29th ,, ,,	...	do	
30th ,, ,,	...	do	
31st ,, ,,	...	Holiday, being the Birthday of His Highness the Maharaja.	
1st August 1953	...	Bills. Reports of the Privileges Committee and Rules Committee and Public Service Commission Regulations.	
2nd ,, ,,	...	Holiday	
3rd ,, ,,	...	Non-official Business — Bills and Resolutions.	

I think that will satisfy particularly Sri Gopala Gowda.

Sri H. K. VEERANNA GOWDH (Maddur).—Is the session likely to be extended further ?

Mr. SPEAKER.—We will see that. This is done in consultation with the Government and the House.

Sri K. HANUMANTHAIYA —There is one other request apart from the programme. Both the Houses are sitting together and simultaneously. Of course, as the House will sympathise with the Ministers, we have to attend important discussions in both the Houses. In fact, I am very much interested in being present throughout the discussion on the Educational Reforms. At the same time I am in charge of the Andhra State Bill in the other House

(Sri K. HANUMANTHAIYA.)

and have to be present there. Therefore, would it be convenient to the House to fix, as they do in Madras, one House to sit in the morning and the other House to sit in the afternoon so that all the Ministers may be present in both the Houses ? In fact it has become very difficult for us to satisfy our own desire in the matter of attending the Houses as well as satisfying the Members of both the Houses.

Mr. SPEAKER.—The question is, whether we shall meet in the morning or afternoon.

(SEVERAL MEMBERS : Morning).

So it will be from 8-30 to 12-30.

Sri K. HANUMANTHAIYA.—8-30 to 12.

Sri J. MOHAMED IMAM.—That is 3½ hours business.

Sri K. HANUMANTHAIYA.—That is more than enough.

Sri J. MOHAMED IMAM : 8-30 to 12-30 ; at least we must have four hours' business. One hour is taken for questions.

Sri K. HANUMANTHAIYA.—We will not mind coming earlier to the session. Let it be closed at 12 so that we may have time to prepare ourselves for attending the other House.

Sri H. K. VEERANNA GOWDH.—8 to 12-30 with half an hour interval.

Mr. SPEAKER.—They want to close at 12 so that they may go home and return. The House must come to some decision.

Sri J. MOHAMED IMAM.—Why not from 12-30 to 5 ?

ಶ್ರೀ ಕೆ. ಪುಟ್ಟಸ್ವಾಮಿ (ಶ್ರೀರಂಗಪಟ್ಟಣ).—ಸ್ವಾಮಿ, 8½ ಘಂಟೆಯಿಂದ 12 ಘಂಟೆಯವರೆಗೆ ಎಂದರೆ ಕೇವಲ 3½ ಘಂಟೆಗಳಕಾಲ ಮಾತ್ರ ಚರ್ಚೆಗೆ ಅವಕಾಶವಾದಂತಾಗುತ್ತದೆ. ಇದಕ್ಕೆ ಬದಲು 12 ಘಂಟೆಯಿಂದ 5 ಘಂಟೆಯವರೆಗಾಗಲೀ ಅಥವಾ 1 ಘಂಟೆಯಿಂದ 6 ಘಂಟೆಯವರೆಗಾಗಲೀ ಸಭೆ ಕುಳಿತು ಕೊಂಡರೆ ಅನುಕೂಲವಾಗುತ್ತದೆ.

Mr. SPEAKER.—The Leader of the House and the Leader of the Opposition will come to some agreement and announce it before we rise for the day.

Sri K. HANUMANTHAIYA.—So far as I am concerned, I leave it to my friend ; whatever time he says I will agree. I don't want any discussion. How many days more we have to sit is another matter.

Mr. SPEAKER.—That is decided in consultation with the House.

Sri H. K. VEERANNA GOWDH.—Therefore I request the Speaker to be definite so that there may not be another extension.

Sri K. HANUMANTHAIYA.—As Sri Veeranna Gowdh said, let some date be fixed so that we can rise definitely, so that there can be no more extension. I would think that discussion on the Andhra Bill may be curtailed and it is not necessary to discuss that subject for five days.

Mr. SPEAKER.—It is left to them.

Sri K. HANUMANTHAIYA.—Two days will be quite enough. We need not take it so seriously as the Andhras and Tamilians have taken in the Madras Assembly. After all, we are interested in 7 taluks and our assets and liabilities range to the tune of 1.5 per cent ; therefore we need not expend much time. Merely because the Madras Assembly discussed the subject for so many days, it does not necessarily mean that we must also discuss it for so many days as the interests involved are not so great. Therefore I would suggest that two days will be enough.

DISCUSSION ON EDUCATIONAL REFORMS—*contd.*

*ಶ್ರೀ ಟಿ. ಮರಿಯಪ್ಪ.—ಈ ಉಪಾಧ್ಯಾರುಗಳನ್ನು ತಯಾರು ಮಾಡತಕ್ಕ ಕಾರ್ಯ ಬಹಳ ಮುಖ್ಯವಾದುದು ; ಮತ್ತು ತ್ವರಿತವಾಗಿಯೂ ಆಗಬೇಕಾದ್ದು. ಈಗ ಎಷ್ಟು ಪಾಠಶಾಲೆಗಳು ಕೆಲಸ ಮಾಡುತ್ತಿವೆಯೋ ಆ ಎಲ್ಲಾ ಪಾಠಶಾಲೆಗಳಲ್ಲಿಯೂ ತರಪೇತಾದ ಉಪಾಧ್ಯಾಯರುಗಳು, ದಕ್ಷರಾದ ಉಪಾಧ್ಯಾಯರುಗಳು ಇದ್ದರೆ ಬಹಳ ಒಳ್ಳೆಯದು. ಈ ಬಗ್ಗೆ ಕಾರ್ಯವನ್ನು ಮೊದಲು ತೆಗೆದುಕೊಳ್ಳಬೇಕು. ಇದು ಬಾಕಿ ಕೆಲಸಗಳಿಗಿಂತ ಬಹಳ ಪ್ರಾಮುಖ್ಯವಾದ್ದೆಂದು ನಾನು ಸೂಚಿಸುತ್ತೇನೆ.

ಎರಡನೆಯದು, ಎಲ್ಲೆಲ್ಲಿ ವಿದ್ಯಾರ್ಥಿಗಳ ಸಂಖ್ಯೆ ವಿಪರೀತವಾಗಿದೆಯೋ ಅಲ್ಲಿ ಎಲ್ಲ ಕಡೆಗಿಂತಲೂ ಹೆಚ್ಚಿನ ಉಪಾಧ್ಯಾಯರುಗಳನ್ನು ಕೊಡಬೇಕು. ಈ ಸಂದರ್ಭದಲ್ಲಿ ಸುಧಾರಣಾ ಸಮಿತಿಯವರು ಮಾಡಿರತಕ್ಕ ಸಲಹೆ ಅಂಗೀಕಾರ ಯೋಗ್ಯವಾಗಿದೆ. ಪ್ರಾಥಮಿಕ ಶಾಲೆಗಳಿಗೆ ತರಪೇತಾದ ಸ್ತ್ರೀಯರನ್ನು ನೇಮಿಸಬೇಕೆಂದು ಹೇಳಿದ್ದಾರೆ. ಇದು ಬಹಳ ಸಾಧುವಾದ ಅಭಿಪ್ರಾಯ. ಪಾಶ್ಚಿಮಾತ್ಯ ದೇಶಗಳಲ್ಲಿ ಬಹುಮಟ್ಟಿಗೆ ಪ್ರಾಥಮಿಕ ಶಿಕ್ಷಣ ಸ್ತ್ರೀಯರ ಕೈಯಲ್ಲಿದೆ. ಆದರೆ ಎಷ್ಟು ಬೇಗ ಆ ಗುರಿಯನ್ನು ನಮ್ಮ ದೇಶದಲ್ಲಿ ಮುಟ್ಟುತ್ತೇವೆಂಬುದನ್ನು ಹೇಳುವುದು ಬಹಳ ಕಷ್ಟ. ನಾನು

ದೇಶದ ಸ್ಥಿತಿಗತಿಗಳಿಗನುಗುಣವಾಗಿ ನಾವು ಕೆಲಸ ಮಾಡಬೇಕಾಗಿದೆ. ಆದರೂ ಪ್ರಯತ್ನಪಟ್ಟರೆ ಸಾವಿರಾರು ಸಂಖ್ಯೆಯಲ್ಲಿ ಸ್ತ್ರೀಯರನ್ನು ತಯಾರುಮಾಡಿ ಪ್ರಾಥಮಿಕ ಶಾಲೆಗಳಿಗೆ ಮಹಿಳಾ ಸ್ತ್ರೀಯರನ್ನು ಕಳುಹಿಸತಕ್ಕದ್ದು ಸಾಧ್ಯವಾಗಬಹುದೆಂದು ನಾನು ಭಾವಿಸುತ್ತೇನೆ.

ಇನ್ನೊಂದೇನೆಂದರೆ, ನಾನಾಗಲೇ ಹೇಳಿದ ಹಾಗೆ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗಿರತಕ್ಕ ಕಡೆ ಹೆಚ್ಚಿನ ಸಂಖ್ಯೆಯಲ್ಲಿ ಉಪಾಧ್ಯಾಯರುಗಳನ್ನು ಒದಗಿಸಬೇಕು. ಇದು ಅಗತ್ಯವಾದ ಕಾರ್ಯ. ಈಗ ಅನೇಕ ಹಳ್ಳಿಗಳಲ್ಲಿ ಒಂದು ರೂಮಿನಲ್ಲೇ ನಾಲ್ಕು ತರಗತಿಗಳನ್ನು ನಡೆಸುತ್ತಿದ್ದಾರೆ. ಅದರಲ್ಲೂ ಒಬ್ಬರೇ ಉಪಾಧ್ಯಾಯರು ನಾಲ್ಕು ತರಗತಿಗಳನ್ನು ನಡೆಸುತ್ತಿರುತ್ತಾರೆ. ಸಮಿತಿಯವರು ಹೇಳಿರುವಹಾಗೆ ನಮ್ಮ ದೇಶದಲ್ಲಿ ಆಗುತ್ತಿರುವ ನಷ್ಟಕ್ಕೆ ಇದೇ ಕಾರಣವೆಂದು ಹೇಳಿದ್ದಾರೆ. ಅದು ತಪ್ಪಬೇಕು. ಮಕ್ಕಳನ್ನು ಸರಿಯಾಗಿ ತಿದ್ದಬೇಕಾದರೆ ಉಪಾಧ್ಯಾಯರುಗಳು ಬೇಕು. ಯಾವ ತರಗತಿಯಲ್ಲೂ 25 ವಿದ್ಯಾರ್ಥಿಗಳ ಸಂಖ್ಯೆಗಿಂತ ಮೀರಬಾರದು. ಸಮಿತಿಯವರೇ ಒಪ್ಪಿರುವ ಹಾಗೆ 6-7 ವರ್ಷಗಳಿಂದೀಚೆಗೆ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗಿದೆ. ಪಾಠಶಾಲೆಗಳನ್ನು ಒದಗಿಸುವುದೇ ಕಷ್ಟವಾಗಿದೆಯೆಂದು ಹೇಳಿರುವುದು ನಿಜವಾಗಿದೆ. ಆದ್ದರಿಂದ ಹೀಗೆ ವಿಧ್ಯಾರ್ಥಿಗಳ ಸಂಖ್ಯೆ ಹೆಚ್ಚುತ್ತಿರುವ ಕಾಲದಲ್ಲಿ ಉಪಾಧ್ಯಾಯರುಗಳ ಸಂಖ್ಯೆಯನ್ನು ಹೆಚ್ಚಾಗಿ ಕೊಡದೆ ಇದ್ದರೆ ಮಕ್ಕಳುಗಳಿಗೆ ಸರಿಯಾಗಿ ಶಿಕ್ಷಣ ಕೊಡುವುದು, ಅವರನ್ನು ಸರಿಯಾಗಿ ತರಪೇತು ಮಾಡುವುದು ಕಷ್ಟ, ನಮ್ಮ ಶಿಕ್ಷಣ ಸುಶಿಕ್ಷಣವಾಗಿರುವುದಿಲ್ಲವೆಂದು ನಾವು ಹೇಳಬಹುದು. ಹಾಗೆಯೇ ಪಾಠಶಾಲೆಗಳಿಗೆ ಬೇಕಾದ ಸೌಲಭ್ಯಗಳನ್ನು ಕೂಡ ಒದಗಿಸಬೇಕಾಗಿದೆ. ಹೆಚ್ಚು ಹೆಚ್ಚು ಸ್ಕೂಲುಗಳನ್ನು ಒದಗಿಸಬೇಕೆಂಬ ಆತುರದಲ್ಲಿ ಹಿಂದೆ ಎಲ್ಲ ಪಾಠಶಾಲೆಗಳಿಗೂ ಆದಷ್ಟು ಸೌಲಭ್ಯಗಳನ್ನು ಒದಗಿಸಿಲ್ಲವೆಂದು ಹೇಳಿದರೆ ತಪ್ಪಾಗಲಾರದು. ಅಲ್ಲದೆ ಎಲ್ಲ ಪಾಠಶಾಲೆಗಳಿಗೂ ಸರಿಯಾಗಿ equipment ಒದಗಿಸಬೇಕಾದರೆ ಲಕ್ಷಾಂತರ ರೂಪಾಯಿಗಳು ಬೇಕಾಗುತ್ತವೆ. ಇದನ್ನು ಸಮಿತಿಯವರು ಪರಿಶೀಲನೆಮಾಡಿದ್ದರೆ ಬಹಳ ಉಪಯುಕ್ತವಾದ ಅಂಕಿಅಂಶಗಳು ದೊರೆಯುತ್ತಿದ್ದುವು. ಅನೇಕ ಪಾಠಶಾಲೆಗಳಲ್ಲಿ ವಿದ್ಯಾರ್ಥಿಗಳು ಕುಳಿತುಕೊಳ್ಳುವುದಕ್ಕೆ ಮಣೆಗಳು ಕೂಡ ಇಲ್ಲ; ಎಷ್ಟೋ ಕಡೆ ಬ್ಲಾಕ್‌ಬೋರ್ಡ್‌ಗಳೇ ಇಲ್ಲ. ಆದ್ದರಿಂದ ಪಾಠಶಾಲೆಗಳಿಗೆ equipment ಕೊಡುವುದು ಅಗತ್ಯ. ಒಂದೇ ಸಾರಿ ಇದನ್ನು ಒದಗಿಸುವುದು ಕಷ್ಟವೆಂಬುದನ್ನು ನಾನು ಒಪ್ಪುತ್ತೇನೆ.

BUSINESS OF THE HOUSE.

Sri MULKA GOVINDA REDDY (Chitaldrug).—It is not so simple as the Hon'ble Chief Minister said, Sir. It is but right that all members of the House have an opportunity to express themselves, because the question is so vital to the interests of Mysore. It is better we have a full discussion for five days.

Mr. SPEAKER.—What about the time—whether the sittings of the House to be in the morning or in the afternoon ? I gather that morning session has been agreed upon. The only question is whether it should be between 8 and 12 or 8-30 and 12-30.

Sri J. MOHAMED IMAM.—We would wish to meet between 1 and 5-30 in the afternoon, Sir.

Sri H. K. VEERANNA GOWDH.-No, Sir. We have already agreed that the sessions should be in the mornings and it may be between 8-30 and 12-30.

Mr. SPEAKER.—It seems much importance is being attached to such a simple question.

Sri K. HANUMANTHAIYA.—The concensus of opinion seems to be that the session should be held in the mornings.

Sri J. MOHAMED IMAM.—Why our party wants the afternoon sessions is for two reasons. One is, that, if we meet in the morning, the period for work is curtailed and the other reason is that it is a discomfort to some of us to get up early.

Mr. SPEAKER.—May I announce what I have gathered after consulting you all ? The Sessions will be held in the mornings from 8-30 to 12-30.

(The House agreed to this).

Sri K. HANUMANTHAIYA.—The next question is about the Andhra Bill. There also, the concensus of opinion seems to be—I suggested two days for discussion and Sri Pattabhiraman very disinterestedly said three days. I think three days would be quite sufficient.

AN HON'BLE MEMBER.—I have got a submission to make, Sir. The Chief Minister said that so far as Mysore is concerned, the Andhra Bill is not very important.....

Mr. SPEAKER.—The Chief Minister did not say that. Let us not discuss on the merits of the Bill while we are trying to come to an agreement regarding the number of days that we should have for discussing this Bill.

Sri J. MOHAMED IMAM.—We are very much concerned about it. It affects our immediate future. We have to apply our full minds and we do not want any restriction fixed even on the time limit. Let the debate take its own course. Let us not fix any time either.

Mr. SPEAKER.--It was your desire.

Sri J. MOHAMED IMAM.--I suggested that the debate should be for five days, but the Chief Minister wants to curtail the debate to three days. Taking the experience of the Legislative Council, three days are hardly sufficient. That is why I said that, if it is not possible to come to some agreement, let the debate take its own course. We may finish it in three days or eight days. We only want that full scope should be given for discussions and this should not be curtailed either for want of time or for any other work. That is why I said that five days should be set apart. If we finish early, we can advance to other busines.

Sri A. BHEEMAPPA NAIK.— Sir, the other House has taken three days. My friend pleads for unrestricted discussion. Even for that there should be some programme fixed. You cannot say that we can go on for any length of time. In my opinion three days would be more than sufficient. If we take the number of hours at our disposal and if we talk exclusively on the Bill, each Member taking fifteen minutes and at least fifty per cent of the members taking part, I am sure, we will finish the debate within three days. I do not know why we should simply go on extending. As the Chief Minister said, three days would be sufficient.

Sri M. RAJASEKHARA MURTHY (Yelandur).-According to the amended programme we have to meet between 8.30 and 12-30. The whole time at our disposal is four hours a day. Out of these four hours,one hour and a half is taken away by questions and another half hour for lunch.

Sri A. G. RAMACHANDRA RAO (Minister for Law and Education).-One hour for questions, I think.

Sri M. RAJASEKHARA MURTHY.--So the remaining time at our disposal will be two hours. Even if five days are allotted, the total period of time at our disposal for debating on this Bill is ten hours. That is insufficient. Therefore, five days are necessary.

Mr. SPEAKER.—Will the House agree to four days ?

Sri MULKA GOVINDA REDDY.--No, Sir. We would like to have five days. In view of the curtailment of the hours of business of the House due to morning sessions, we must have 5 days.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ (ಶಿವಮೊಗ್ಗ).-12 ಗಂಟೆಯಿಂದ ನಫೆ ಸೇರಿದರೆ 3 ದಿವಸದಲ್ಲೇ ಕೆಲಸ ಮುಗಿಯುವ ಹಾಗಿದ್ದರೆ, 5 ದಿವಸ ಬೆಳಗಿನ ಅಧಿವೇಶನ ವನ್ನು ಮಾಡಬೇಕಾಗಿಲ್ಲ.

Sri J. MOHAMED IMAM.--All right, Sir, with due deference to your wishes, we will agree to four days. But if the Speaker feels, he may extend it by one day.

Mr. SPEAKER.—So discussion on the Andhra Bill will be for four days and three days for discussion on the Educational Reforms.

Sri K. HANUMANTHAIYA.--I hope this is the final programme, Sir.

Mr. SPEAKER.--Yes. This is final.

I think there is only five minutes left. Sri Mariappa will continue his speech on Educational Reforms on the day we take up this subject for discussion. The House will now rise for the day and meet again at 8-30 A.M. tomorrow.

———

The House adjourned at Fifty-eight minutes past Four of the Clock to meet again at Thirty Minutes past Eight of the Clock on Wednesday the 22nd July 1953.